ಫೋನುಮಾಡಿದಾಗ ಅದನ್ನು ಹಿರಿಯಮಗ ಹರೀಶ್ ಸ್ವೀಕರಿಸಿದಾಗ ಅವನಿಗೆ ನನ್ನ ಮತ್ತು ಚಿ. ಸೌ. ಪರವಾಗಿ ಕೋರಿದ ವಿಷಾದ, ಸಮಯ ಬೆಳಿಗ್ಗೆ 8.30.' ಈ ಫೋನುಗಳು ಬಂದ ಮೇಲೆ ಪತ್ರಗಳು ಬರೆಯುವ, ಬರುವುದು ಕಮ್ಮಿಯಾಗತೊಡಗಿದಾಗ ಅಪ್ಪನ ದಾಖಲಾತಿಗೂ ಹೊಡೆತ ಬೀಳತೊಡಗಿತ್ತು.


ಮೊಬೈಲಿನಲ್ಲಿ ನಂಬರ್ ಸೇವ್ ಮಾಡಿಕೊಳ್ಳುವುದು ಸುಲಭವಾದರೂ ನಮ್ಮಪ್ಪನಿಗೆ ಬೇಕಾದ ವಿವರಗಳನ್ನು ಬರೆಯುವುದಕ್ಕೆ ಅಲ್ಲಿ ಜಾಗವಿರಲಿಲ್ಲ. ಅಕಸ್ಮಾತ್ ಜಾಗವಿದ್ದರೂ ದುಂಡಾಗಿ ತಮ್ಮ ಹಸ್ತಾಕ್ಷರದಲ್ಲಿ ಡೈರಿಯಲ್ಲಿ ಬರೆದ ತೃಪ್ತಿ ಅಪ್ಪನಿಗೆ ಸಿಗುತ್ತಿರಲಿಲ್ಲ. ಆದ್ದರಿಂದ ಫೋನಿನಲ್ಲಿ ಆಯಾ ಹೆಸರಿನ ಪಕ್ಕ 1, 2, 3, ಇತರೇ ಸಂಖ್ಯೆಗಳನ್ನು ಕೊಟ್ಟು ಅದರ ವಿವರಗಳನ್ನು ತಮ್ಮ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಿದ್ದರು. ಉದಾಹರಣೆಗೆ ನಮ್ಮಪ್ಪನ ಫೋನಿನಲ್ಲಿ ನಂದಿನಿ ಎಂಬ ನಾಲ್ಕು ಹೆಸರುಗಳಿದ್ದವು. ನಂದಿನಿ 1,2,3,4. ಈ ನಂದಿನಿಯರೆಲ್ಲ ಅಪ್ಪನ ಡೈರಿಯಲ್ಲಿ ವಿಸ್ತೃತರಾಗಿರುತ್ತಿದ್ದರು.

ನಂದಿನಿ 1ನನ್ನ ಭಾವಮೈದುನ ಶಿವಮೊಗ್ಗೆಯ ನ್ಯಾಶನಲ್ ಮಲ್ಟಿಪರ್ಪಸ್ ಹೈಸ್ಕೂಲಿನ ಪ್ರಖ್ಯಾತ ಗಣಿತಶಾಸ್ತ್ರ ಪ್ರಾಧ್ಯಾಪಕ ಸೂರ್ಯನಾರಾಯಣರಾವ್ ಅವರ ಎರಡನೇ ಮಗಳು

ನಂದಿನಿ 2 ನಮ್ಮ ಬೀಗರ ಎದುರುಮನೆಯಲ್ಲಿ ವಾಸವಾಗಿರುವ ಗಣಪತಿ ಸಚ್ಚಿದಾನಂದ ಸ್ವಾಮಿಯ ಅಪ್ಪಟ ಭಕ್ತ ಶ್ರೀ ವೆಂಕಟೇಶಮೂರ್ತಿಯವರ ಮಗಳು ಹಾಗೂ ಜಯನಗರದ 'ಕ್ರೇಡಲ್' ಆಸ್ಪತ್ರೆಯ ಪ್ರಖ್ಯಾತ ವೈದ್ಯೆ ಮತ್ತು ಚಿ.ಸೌ. ಪದ್ಮ (ನನ್ನ ಹೆಂಡತಿ)ಳ ಆತ್ಮೀಯ ಗೆಳತಿ

ನಂದಿನಿ 3 ನನ್ನ ಗೆಳೆಯ ಹಾಗೂ ಶ್ರೇಷ್ಠ ಕಲಾವಿದ ಯಳ್ಳಂಬಳಸೆ ಶ್ರೀಕಂಠಯ್ಯನವರ (ಇವರು ನಿಜವಾಗಿಯೂ ಶ್ರೇಷ್ಠ ಕಲಾವಿದರೇ) ಏಕೈಕ ಪುತ್ರಿ, ಮೊಕ್ಕಾಂ ಗಿರಿನಗರ

ನಂದಿನಿ 4 ನನ್ನ ಗೆಳೆಯ ನಾಗಮಂಗಲದ ಪ್ರಾಮಾಣಿಕ ವರ್ತಕ, ಹೋಟೆಲ್ ವಸಂತದ ಮಾಲೀಕ ಮೂರ್ತಿಯವರ ಮಗಳು, ಮೊಕ್ಕಾಂ ಮೈಸೂರು.



ಸಂಬಂಧ ಹಾಗೂ ವಯಸ್ಸಿನ ಅನುಕ್ರಮಣಿಕೆ ಇಲ್ಲಿ ಈ ನಂದಿನಿಯರ ಹಯರಾರ್ಕಿಯನ್ನು, ಆರೋಹಾವರೋಹಗಳನ್ನು ಆನಂದತೀರ್ಥರ ತಾರತಮ್ಯವಾದದಂತೆ ನಿರ್ಧರಿಸಿತ್ತು. ಪುಣ್ಯಕ್ಕೆ ನಮ್ಮಪ್ಪ ಬದುಕಿರುವವರೆಗೆ ಉತ್ತರಾದಿಮಠದೊಕ್ಕಲಿನ ಯಾವ ನಂದಿನಿಯೂ ಅವರ ಮೊಬೈಲಿನಲ್ಲಿ ಸೇವ್ ಆಗಲಿಲ್ಲ. ಅಕಸ್ಮಾತ್ ಆಗಿದ್ದರೆ ನಂದಿನಿ 1 ಆಟೋಮ್ಯಾಟಿಕ್ ಆಗಿ ಎರಡನೆಯ ಸ್ಥಾನಕ್ಕಿಳಿದುಬಿಡುತ್ತಿದ್ದಳು.